**ಸಾಕ್ಷಿಗೆ ದಿನಾಂಕಃ24-03-2026 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**:: ಪಾಟೀ ಸವಾಲು :: ವಾದಿ ಪರ ಶ್ರೀ. GM ವಕೀಲರಿಂದ ::**

ನನಗೆ 1 ನೇ ವಾದಿಯ ತಂದೆ ಚಿಕ್ಕ ತಿಮ್ಮಪ್ಪ ಹಾಗೂ 2 ನೇ ವಾದಿಯ ತಂದೆ ರಾಮಪ್ಪ ರವರು ಗೊತ್ತು. ತಿಮ್ಮಣ್ಣ ಬಿನ್ ಗಿರಿಯಣ್ಣ ರವರು ನನ್ನ ಅಜ್ಜನ ಅಣ್ಣ ಆಗಿರುತ್ತಾರೆ. ಸದರಿ ಗಿರಿಯಣ್ಣ ರವರಿಗೆ ಒಟ್ಟು 3 ಜನ ಮಕ್ಕಳು ಇದ್ದರು.ಸದರಿಯವರು ತಿಮ್ಮಣ್ಣ, ಮೂಡಲಗಿರಿಯಪ್ಪ ಮತ್ತು ಹನುಮಂತಪ್ಪ ಆಗಿದ್ದರು. ಗಿರಿಯಣ್ಣ ರವರ ಮಕ್ಕಳ ಪೈಕಿ ಯಾವುದೇ ನೊಂದಾಯಿತ ವಿಭಾಗ ಪತ್ರದ ಅಡಿ ವಿಭಾಗ ಆಗಿರುವುದಿಲ್ಲ, ಕೇವಲ ಬಾಯಿ ಮಾತಿನಲ್ಲಿ ವಿಭಾಗ ಮಾಡಿಕೊಂಡಿರುತ್ತಾರೆ. ಸದರಿ ಬಾಯಿ ಮಾತಿನ ಒಪ್ಪಿಗೆಯಲ್ಲಿ ಯಾವ ಜಾಗ ಯಾರಿಗೆ ಹೋಗಿರುತ್ತದೇ ಎಂದು ನನಗೆ ಈಗ ನೆನಪಿಲ್ಲ. ದಾವಾ ಶೆಡ್ಯೂಲ್ ಸ್ವತ್ತು ಹೊರತುಪಡಿಸಿ ನಮ್ಮ ಕುಟುಂಬದಲ್ಲಿ ಬೇರೆ ಜಮೀನುಗಳು ಇರುತ್ತವೆ. ಆ ರೀತಿ ನಿಖರವಾಗಿ ಎಷ್ಟು ವಿಸ್ತೀರ್ಣದ ಆಸ್ತಿ ಇರುತ್ತದೆ ಎಂದು ನನಗೆ ನೆನಪಿಲ್ಲ. ಕುಟುಂಬದ ಮೌಖಿಕ ವಿಭಾಗದಲ್ಲಿ ತಿಮ್ಮಣ್ಣ ರವರಿಗೆ ಸರ್ವೇ ನಂಬರ್ 42 ರಲ್ಲಿ 22 ಮತ್ತು 16 ಗುಂಟೆಗಳಂತೆ 2 ಜಾಗ, ಮೂಡಲಗಿರಿಯಪ್ಪ ರವರಿಗೆ ಸರ್ವೇ ನಂಬರ್ 42 ರಲ್ಲಿ 22 ಮತ್ತು 15 ಗುಂಟೆಗಳಂತೆ 2 ಜಾಗ, ಹನುಮಂತಪ್ಪರವರಿಗೂ ಸರ್ವೇ ನಂಬರ್ 42 ರಲ್ಲಿ 22 ಮತ್ತು 15 ಗುಂಟೆಗಳಂತೆ 2 ಜಾಗ ಬಂದಿರುತ್ತದೆ. ಚಿಕ್ಕ ತಿಮ್ಮಪ್ಪ ಹಾಗೂ ರಾಮಪ್ಪ ರವರಿಗೆ ನಿಖರವಾಗಿ ಎಷ್ಟು ಆಸ್ತಿ ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ.

ನಾನು 10 ನೇ ತರಗತಿಯವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ. ನನ್ನ ತಂದೆಗೆ ನಾನು, ಡಿ1 ಬಿ ಮತ್ತು ಸಿ ರಂತೆ ಮೂರು ಜನ ಮಕ್ಕಳು ಇರುತ್ತೇವೆ. ನಾನು ಹಾಗೂ ನನ್ನ ಸಹೋದರ ಸಹೋದರಿಯರು ಬೇರೆ ಬೇರೆ ಮನೆಗಳಲ್ಲಿ ವಾಸ ಮಾಡಿಕೊಂಡಿರುತ್ತೇವೆ. ವಾದಿಗಳು ಈ ದಾವೆಯನ್ನು ನಾನು ವಾಸ ಮಾಡಿಕೊಂಡಿರುವ ಮನೆಯ ಮೇಲೆ ಶಾಶ್ವತ ಪ್ರತಿಬಂಧಕಾಜ್ಞೆ ಕೋರಿ ಈ ದಾವೆ ಹೂಡಿರುತ್ತಾರೆ. ದಾವಾ ಶೆಡ್ಯೂಲ್ ಸ್ವತ್ತಿನ assessment ನಂಬರ್ 342, ಹೊಸ assessment 385 ಆಗಿರುತ್ತದೆ. ದಾವಾ ಶೆಡ್ಯೂಲ್ ಸ್ವತ್ತಿನ ಅಳತೆ 40 x 62 ಅಡಿ ಆಗಿರುತ್ತವೆ. ದಾವಾ ಶೆಡ್ಯೂಲ್ ಸ್ವತ್ತಿನ ಚೆಕ್ಕುಬಂದಿ ದಕ್ಷಿಣಕ್ಕೆ ರಸ್ತೆ, ಪೂರ್ವಕ್ಕೆ ರಂಗಪ್ಪ ರವರ ನಿವೇಶನ, ಪಶ್ಚಿಮ ಹಾಗೂ ಉತ್ತರಕ್ಕೆ ಸೋಮಶೇಖರಪ್ಪ ರವರ ನಿವೇಶನ ಇರುತ್ತದೆ.

ನಾನು ಹೇಳುತ್ತಿರುವ ಜಾಗದ ಚೆಕ್ಕುಬಂದಿ ಹಾಗೂ ದಾವಾ ಶೆಡ್ಯೂಲ್ ಸ್ವತ್ತಿನ ಚೆಕ್ಕುಬಂದಿ ಬೇರೆ ಬೇರೆ ಎಂದರೆ ಸರಿಯಲ್ಲ. ದಾವಾ ಶೆಡ್ಯೂಲ್ ಸ್ವತ್ತಿನ ವಿಸ್ತೀರ್ಣ 45 x 62 ಅಡಿ ಆಗಿರುತ್ತದೆ ಎಂದರೆ ಸರಿ. ದಾವಾ ಶೆಡ್ಯೂಲ್ ಸ್ವತ್ತಿನ ಚೆಕ್ಕುಬಂದಿ ಪೂರ್ವಕ್ಕೆ ಮೂಡಲಪ್ಪ ರವರ ನಿವೇಶನ, ಪಶ್ಚಿಮಕ್ಕೆ ಕೃಷ್ಣಪ್ಪ ರವರ ನಿವೇಶನ, ಉತ್ತರಕ್ಕೆ ಕರಿಯಪ್ಪ ರವರ ನಿವೇಶನ ಮತ್ತು ದಕ್ಷಿಣಕ್ಕೆ ರಸ್ತೆ ಇರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಈಗ ಬಾಜುದಾರರು ಕೆಲವರು ಮೃತರಾಗಿದ್ದು ಅವರ ಮಕ್ಕಳ ಹೆಸರಿನಲ್ಲಿ ಖಾತೆ ಇರುತ್ತದೆ ಎಂದು ನುಡಿಯುತ್ತಾರೆ. ದಾವೆಯಲ್ಲಿ ಹೂಡಿರುವ ತಕರಾರಿನ ಬಗ್ಗೆ ನನಗೆ ಮಾಹಿತಿ ಇರುತ್ತದೆ.

ದಾವಾ ಶೆಡ್ಯೂಲ್ ಸ್ವತ್ತು ನಮ್ಮ ಜಾಗ ಎಂದು ತೋರಿಸಲು ನಮ್ಮ ಅಜ್ಜನ ಹೆಸರಿನಲ್ಲಿ ಇರುವ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇವೆ. ನಿಪಿ2 ರಂತೆ ದಾವಾ ಶೆಡ್ಯೂಲ್ ಸ್ವತ್ತಿನ assessment ನಮೂದು ತಿಮ್ಮಣ್ಣರವರ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿ. ವಾದಿಯ ದಾವಾ ಶೆಡ್ಯೂಲ್ ಸ್ವತ್ತಿನ ಸ್ವಾಧೀನಕ್ಕೆ ನಾವುಗಳು ತಕರಾರು ಮಾಡಿದ ಕಾರಣ ಅವರು ಈ ದಾವೆ ಹೂಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಶೆಡ್ಯೂಲ್ ಸ್ವತ್ತಿನ ಮೇಲೆ ನಮಗೆ ಯಾವುದೇ ಹಕ್ಕು ಹಿತಾಸಕ್ತಿ ಇಲ್ಲದಿದ್ದರೂ ದುರುದ್ದೇಶದಿಂದ ವಾದಿಯ ಸ್ವಾಧೀನಕ್ಕೆ ತೊಂದರೆ ನೀಡುತ್ತಾ ಬಂದಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಶೆಡ್ಯೂಲ್ ಸ್ವತ್ತಿನ ಸಂಪೂರ್ಣ ಮಾಲೀಕರು ಹಾಗೂ ಸ್ವಾಧೀನದಾರರು ವಾದಿ ಆಗಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಶೆಡ್ಯೂಲ್ ಸ್ವತಿನ ಮೇಲೆ ನನಗೆ ಯಾವುದೇ ಅಧಿಕಾರ ನಮಗೆ ಇಲ್ಲದಿದ್ದರೂ ದುರುದ್ದೇಶದಿಂದ ಅವರಿಗೆ ತೊಂದರೆ ನೀಡುತ್ತಾ ಬಂದಿರುತ್ತೇವೆ ಎಂದರೆ ಸರಿಯಲ್ಲ.

ಹನುಮಂತಪ್ಪ ಬಿನ್ ಗಿರಿಯಣ್ಣ ನನ್ನ ಅಜ್ಜ ಎಂದರೆ ಸರಿ. ಸಾಕ್ಷಿಗೆ ಒಂದು ಡಿಮ್ಯಾಂಡ್ ರಿಜಿಸ್ಟರ್ ಅನ್ನು ತೋರಿಸಲಾಗಿ ಸದರಿ ಆಸ್ತಿಯು ನನ್ನ ಅಜ್ಜನ ಹೆಸರಿನಲ್ಲಿ ಉಳಿದಿರುತ್ತದೆ ಎಂದು ಸಾಕ್ಷಿ ನೋಡಿ ಒಪ್ಪಿದ ಕಾರಣ ಅದನ್ನು ನಿಪಿ5 ಎಂದು ಗುರುತಿಸಲಾಯಿತು. ಸಾಕ್ಷಿಗೆ ಮತ್ತೊಂದು ಡಿಮ್ಯಾಂಡ್ ರಿಜಿಸ್ಟರ್ ಅನ್ನು ತೋರಿಸಲಾಗಿ ಸದರಿ ಆಸ್ತಿಯು ನನ್ನ ಅಜ್ಜನ ಅಣ್ಣ ಮೂಡಲಗಿರಿಯಪ್ಪ ರವರ ಹೆಸರಿನಲ್ಲಿ ಉಳಿದಿರುತ್ತದೆ ಎಂದು ಸಾಕ್ಷಿ ನೋಡಿ ಒಪ್ಪಿದ ಕಾರಣ ಅದನ್ನು ನಿಪಿ6 ಎಂದು ಗುರುತಿಸಲಾಯಿತು.

**:: ಮರು ವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

sd/-

ಪ್ರಧಾನ ಸಿ.ಜೆ ಮತ್ತು ಜೆ.ಎಂ.ಎಫ್.ಸಿ

ತರೀಕೆರೆ.

ಸಾಕ್ಷಿಯ ಸಹಿ: